

# ಸಲ್ಲೂ ಯಡವಟ್ಟು

ಸಲ್ಮಾನ್ ಖಾನ್ ಮತ್ತೊಂದು ವಿವಾದದಲ್ಲಿ ಸಿಲುಕಿದ್ದಾನೆ. ವಿವಾದ ಹೊಸತಲ್ಲ. ಆದರೆ ಅದರ ಸ್ವರೂಪ ಹೊಸತು. ತನ್ನ ಶೂಟಿಂಗ್‌ನಲ್ಲಿ ಕುಸ್ತಿಪಟುವೊಬ್ಬನ ಜತೆಗೆ ಸೆಣಸಾಡುವ ದೃಶ್ಯದ ಬಳಿಕ ರಿಟೇಕ್‌ಗಳಿಂದ ಸುಸ್ತಾದ ಸಲ್ಲೂ, ತನ್ನ ಪರಿಸ್ಥಿತಿಯನ್ನು ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಹೋಲಿಸಿದ್ದೇ ವ್ಯಾಪಕ ಟೀಕೆಗೆ ಕಾರಣವಾಗಿದೆ. ಸಲ್ಲೂ ವಿರುದ್ಧ ಟ್ವಿಟರ್ ಮತ್ತು ಫೇಸ್‌ಬುಕ್‌ಗಳಲ್ಲಿ ತೀವ್ರ ಖಂಡನೆಯ ಪೋಸ್ಟ್‌ಗಳು ಏರಿವೆ. ಮಹಿಳಾ ಸಂಘಟನೆಗಳು ಪೊಲೀಸ್ ದೂರನ್ನೂ ನೀಡಿವೆ.

ಪ್ರಮುಖ ಮನರಂಜನಾ ವೆಬ್‌ಸೈಟ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಸಲ್ಲೂ 'ಸುಲ್ತಾನ್' ಚಿತ್ರದ ಬಗ್ಗೆ ಮಾತನಾಡಿದ್ದ. '120 ಕೆ.ಜಿ. ತೂಕದ ವ್ಯಕ್ತಿಯನ್ನು ಚಿತ್ರೀಕರಣಕ್ಕಾಗಿ 10 ಬಾರಿ ಹತ್ತು ಕೋನಗಳಲ್ಲಿ ಎತ್ತಬೇಕಿತ್ತು. ಕುಸ್ತಿಗಾಗಿ ತಳ್ಳಾಟ, ನೂಕಾಟಗಳನ್ನು ಮಾಡಬೇಕಿತ್ತು, ನೆಲದ ಮೇಲೂ ಬೀಳಬೇಕಿತ್ತು. ನಿಜವಾದ ಕುಸ್ತಿಯಲ್ಲಿ ಇಷ್ಟು ಶ್ರಮ ಇರುವುದಿಲ್ಲ. ಆದರೆ ಸಿನಿಮಾ ಎಂದಾಗ ಅದನ್ನು ಮಾಡಲೇಬೇಕಾಗುತ್ತದೆ. ಹೀಗಾಗಿ ಅತಿಯಾದ ಆಯಾಸ ಆಗುತ್ತಿತ್ತು. ಕುಸ್ತಿಯ ರಿಂಗ್‌ನಿಂದ ಹೊರಹೋಗುವಾಗ ನಾನು ಅತ್ಯಾಚಾರಕ್ಕೊಳಗಾದ ಮಹಿಳೆಯಂತಾಗುತ್ತಿದ್ದೆ. ನೇರವಾಗಿ ನಡೆಯಲು ಆಗುತ್ತಿರಲಿಲ್ಲ. ಊಟ ಮಾಡಿ ಮತ್ತೆ ತರಬೇತಿಗೆ ಮರಳುತ್ತಿದ್ದೆ..' ಎಂದು ಸಲ್ಮಾನ್ ಹೇಳಿಕೊಂಡಿದ್ದ. ಇದೇ ಸಂದರ್ಶನದಲ್ಲಿ ಮಹಿಳೆಯರು ಮತ್ತು ಮದ್ಯವನ್ನು ಹೋಲಿಕೆ ಮಾಡಿದ್ದಕ್ಕೂ ಟೀಕೆ ವ್ಯಕ್ತವಾಗಿದೆ.

'ಕಾಫಿ ಮತ್ತು ಸಿಗರೇಟ್‌ಗಳ ನಡುವಣ ಆಯ್ಕೆಯಲ್ಲಿ ಕಾಫಿಯನ್ನು ಬಿಟ್ಟು ಬಿಡುತ್ತೇನೆ. ಸಿಗರೇಟ್ ಮತ್ತು ಮದ್ಯದ ನಡುವೆ ಸಿಗರೇಟ್ ಬಿಡುತ್ತೇನೆ. ಮದ್ಯ ಮತ್ತು ಮಹಿಳೆ ನಡುವೆ ಮಹಿಳೆಯನ್ನು ಆಯ್ಕೆ ಮಾಡುತ್ತೇನೆ. ಅದರ ಬಳಿಕ ಜಗತ್ತನ್ನೇ ಬಿಡುತ್ತೇನೆ. ಆದರೆ ಎಂದಿಗೂ ಸಿನಿಮಾ ಮಾತ್ರ ಬಿಡುವುದಿಲ್ಲ' ಎಂದೂ ಸಲ್ಲೂ ಹೇಳಿದ್ದಾನೆ.

ಬಾಲಿವುಡ್‌ನಲ್ಲಿ ಸಲ್ಲೂ ಭಾಯ್‌ಗೆ ಸಮರ್ಥಕರೂ ಇದ್ದಾರೆ. 'ಆತ ಮಗುವಿನಂತೆ. ಆತ ಹೇಳಿದ್ದಕ್ಕೆ ಆಳವಾದ ಅರ್ಥ ಕಲ್ಪಿಸುವುದು ಬೇಡ' ಎಂದು ಕೆಲವರು ಸಮರ್ಥಿಸಿದ್ದಾರೆ.

## ಜನಪ್ರಿಯತೆಯೇ ಬೇಡ!

ಸಿನಿಮಾಗಳಲ್ಲಿ ಕಾಣಿಸಿಕೊಳ್ಳದಿದ್ದರೂ, ಸುದ್ದಿಗಳಲ್ಲಿ ಸದಾ ಚಾಲ್ತಿಯಲ್ಲಿರಬೇಕು ಎನ್ನುವ ಬಯಕೆ ನಟ ನಟಿಯರದು. ಇಂಥ ಜನಪ್ರಿಯತೆ ಗುಂಗು ಅಂಟಿಸಿಕೊಂಡವರು ಕೆಲವರು ವಿವಾದಗಳನ್ನು ಸೃಷ್ಟಿಸುವುದೂ ಇದೆ. ಇಂತಹವರ ನಡುವೆ ಇರುವ ಅಪವಾದ ಶೋಭಿತಾ ಧುಲಿಪಾಲ. ಈಕೆ ಅನುರಾಗ್ ಕಶ್ಯಪ್ ನಿರ್ದೇಶನದ 'ರಾಮನ್ ರಾಘವ್ 2.0' ಚಿತ್ರದ ನಾಯಕಿ.

'ಒಬ್ಬ ನಟಿಯಾಗಿ ನಾನು ಜನರು ನನ್ನ ಸಿನಿಮಾ ಮತ್ತು ನನ್ನ ಕೆಲಸವನ್ನು ನೋಡುವುದನ್ನು ಬಯಸುತ್ತೇನೆ. ವ್ಯಕ್ತಿಗತವಾಗಿ ನನಗೊಂದು ಐಡೆಂಟಿಟಿ ಬೇಕೆಂದು ಇಚ್ಛಿಸುವುದಿಲ್ಲ. ಜನಪ್ರಿಯಳಾಗುವುದರಲ್ಲಿ ನನಗೆ ಆಸಕ್ತಿ ಇಲ್ಲ. ಆದರೆ ಸದಾ ಸ್ಮರಣೀಯಳಾಗಿರಬೇಕು ಎಂದು ಆಸೆ ಪಡುತ್ತೇನೆ. ಜನಪ್ರಿಯತೆ ಮತ್ತು ಸ್ಮರಣೀಯತೆ ನಡುವೆ ತೆಳುವಾದ ಗೆರೆ ಇದೆ' ಎಂದಿದ್ದಾಳೆ ಶೋಭಿತಾ.

2013ರಲ್ಲಿ ಮಿಸ್ ಅರ್ಥ್ ಕಿರೀಟ ಧರಿಸಿದ್ದ ಶೋಭಿತಾ, 2014ರಲ್ಲಿ ಕಿಂಗ್‌ಫಿಷರ್ ಕ್ಯಾಲೆಂಡರ್‌ನಲ್ಲಿ ಕಾಣಿಸಿಕೊಂಡಿದ್ದಳು. ಈಗ ಬಾಲಿವುಡ್ ಆಕೆಯನ್ನು ಹೊಸ ಪಥಕ್ಕೆ ಕರೆದುಕೊಂಡು ಬಂದಿದೆ. 'ರಾಮನ್ ರಾಘವ್ 2.0' ಚಿತ್ರದಲ್ಲಿ ಶೋಭಿತಾ, ನವಾಜುದ್ದೀನ್ ಸಿದ್ದಿಕಿ ಮತ್ತು ವಿಕ್ಕಿ ಕೌಶಾಲ್ ಜತೆ ತೆರೆ ಹಂಚಿಕೊಂಡಿದ್ದಾಳೆ. 'ನವಾಜುದ್ದೀನ್ ಅವರಂತಹ ನಟರ ಜತೆ ನಟಿಸುವುದೇ ದೊಡ್ಡ ಗೌರವ' ಎಂದಿದ್ದಾಳೆ ಆಕೆ. ಮುಂಬೈನಲ್ಲಿ 1960ರ ದಶಕದಲ್ಲಿ ಸರಣಿ ಹತ್ಯೆಗಳನ್ನು ನಡೆಸಿ ಬೆಚ್ಚಿಬೀಳಿಸಿದ್ದ ರಾಮನ್ ರಾಘವ್‌ನ ಬದುಕಿನ ನೈಜ ಘಟನೆಗಳನ್ನು ಅನುರಾಗ್ ಸಿನಿಮಾಕ್ಕೆ ತಂದಿದ್ದಾನೆ.



■ ಅಮಿ